# ತಾಳಗುಂದ ಶಾಸನ ಮತ್ತು ಸಂಸ್ಕೃತಿ

**ರುದ್ರಮುನಿ ಎಚ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಳೆಹೊನ್ನೂರು.

**Received: 29-02-2024 ; Accepted: 16-03-2024 ; Published: 07-05-2024**

**DOI: https://doi.org/10.5281/zenodo.11126992**

## ABSTRACT:

ತಾಳಗುಂದ ಶಾಸನವು ಕದಂಬರ ಪ್ರಮುಖ ಐತಿಹಾಸಿಕ ಶಾಸನವಾಗಿದೆ. ಕನ್ನಡ ಸಾಹಿತ್ಯ, ಶಾಸನ, ಕಲೆ, ಸಂಸ್ಕೃತಿ ಹಾಗೂ ಆ ಕಾಲದ ಜನರ ಜೀವನ ಕ್ರಮಗಳು ಈ ಶಾಸನದಲ್ಲಿ ಕಂಡುಬಂದಿವೆ. ವಿದ್ಯೆ ಕಲಿಯಲು ಹೋದ ಕನ್ನಡಿಗನಿಗೆ ಆದ ಅಪಮಾನದಿಂದ ಸಿಡಿದೆದ್ದು ಕನ್ನಡದ ಮೊದಲ ಸಾಮ್ರಾಜ್ಯ ನಿರ್ಮಾಣಕ್ಕೆ ಕಾರಣವಾದ ವಿವರ ಈ ಶಾಸನದಲ್ಲಿದೆ. ಕರ್ನಾಟಕದ ಮೊದಲ ಕೆರೆ ಹಾಗೂ ದೇವಾಲಯಗಳ ಸ್ಥಾಪನೆ, ಕನ್ನಡದ ರಾಜಮನೆತನವೊಂದು ಆ ಕಾಲಕ್ಕಾಗಲೇ ಉತ್ತರ ಭಾರತ ಹಾಗೂ ದಕ್ಷಿಣ ಭಾರತಗಳ ನಡುವೆ ವೈವಾಹಿಕ ಸಂಬಂಧ ಬೆಳೆಸಿಕೊಂಡಿತ್ತು ಎಂಬ ವಿವರ ಈ ಶಾಸನದಲ್ಲಿದೆ. ಕನ್ನಡಿಗರ ಸ್ವಾಭಿಮಾನ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ದೃಷ್ಟಿಯಿಂದ ತಾಳಗುಂದ ಶಾಸನ ಮಹತ್ವದ್ದಾಗಿದೆ. ಇತ್ತೀಚಿನ ಸಂಶೋಧನೆಗಳಿಂದ ಕರ್ನಾಟಕದ ಮೊದಲ ಪ್ರಾಚೀನ ಶಾಸನ ಎಂಬ ಹಿರಿಮೆಗೆ ಪಾತ್ರವಾಗಿದೆ.

## KEYWORDS:

ವಿದ್ಯೆಯ ಮಹತ್ವ, ಪ್ರಣವೇಶ್ವರ ದೇವಸ್ಥಾನ, ಕನ್ನಡಿಗರ ಸ್ವಾಭಿಮಾನ, ಗುಪ್ತರು ಮತ್ತು ಕದಂಬರ ಸಂಬಂಧ, ಕನ್ನಡದ ಮೊದಲ ಶಾಸನ ಕವಿ.

ಸಂಸ್ಕೃತಿ–ಸಮಾಜ ಮಾನವನ ಬದುಕಿನಲ್ಲಿ ಪರಸ್ಪರವಾಗಿರುತ್ತದೆ. ಸಂಸ್ಕೃತಿ ಪ್ರದೇಶದಿಂದ ಪ್ರದೇಶಕ್ಕೆ, ಸಮಾಜದಿಂದ ಸಮುದಾಯಕ್ಕೆ ಭಿನ್ನವಾಗಿ ಕಂಡುಬರುತ್ತದೆ. ನಾಗರಿಕತೆ ಬೆಳೆದಂತೆ, ಮಾನವನ ಅತ್ಯುತ್ತಮ ಶ್ರಮ ಬೆಳೆಯಿತು, ಬದುಕಿನ ವಿಧಾನಗಳನ್ನು ಮಾನವ ಪರೀಕ್ಷಿಸಿಕೊಳ್ಳುತ್ತಾ ಹೋದಂತೆಲ್ಲ ಸಂಸ್ಕೃತಿಯ ಬಗೆಗಿನ ತಿಳುವಳಿಕೆಗಳು ಅಭಿವೃದ್ಧಿಗೊಂಡವು. ಆದ್ದರಿಂದ ಸಂಸ್ಕೃತಿ ಎಂಬ ಪದಕ್ಕೆ ಏಕಮುಖದ ಸ್ವರೂಪವಿಲ್ಲ ಬಹುಮುಖಿ ವಿಭಿನ್ನ ಆಯಾಮಗಳಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಸಂಶೋಧನೆಯೆಂದರೆ, ಲೋಕದ ಜ್ಞಾನವನ್ನು ಕುರಿತ ಅರಿವಿನ ಹುಡುಕಾಟವಾಗಿದ್ದು ನಿರ್ದಿಷ್ಟವಾಗಿದ್ದ ಜ್ಞಾನದ ಬಗ್ಗೆ ತಿಳುವಳಿಕೆಯ ವ್ಯಾಪ್ತಿಯನ್ನು

ಹೆಚ್ಚಿಸುವ ಕೆಲಸವಾಗಿದೆ. ಸಂಶೋಧನಾ ಕಾರ್ಯದ ಮೂಲಕ ಅಧ್ಯಯನ ಕೈಗೊಂಡಾಗ ಆಲೋಚನೆಯು ಹಲವು ವಿಷಯಗಳನ್ನು ಭಿನ್ನ ಭಿನ್ನವಾಗಿ, ಸೂಕ್ಷ್ಮವಾಗಿ ನೋಡುವುದಕ್ಕೆ ಬೇಕಾದ ಕ್ರಮಗಳನ್ನು ಹುಟ್ಟಿಸುವ ಕೆಲಸಮಾಡುತ್ತದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಸಂಶೋಧನೆಗಳು ಅದೆಷ್ಟೋ ಹೊಸ ಸಂಗತಿಗಳನ್ನು ನೀಡುತ್ತಾ ಬಂದಿದೆ. ಶಾಸನ, ಹಸ್ತಪ್ರತಿ, ಕೃತಿಗಳ ಸಂಪಾದನೆ, ತಾಳೆಗರಿ, ಓಲೆಪ್ರತಿಗಳಲ್ಲಿ ಸಿಕ್ಕಮಾಹಿತಿ ಮತ್ತು ದೇವಸ್ಥಾನಗಳ ಸುತ್ತಮುತ್ತಲಿನ ಕಲ್ಲಿನ ಕೆತ್ತನೆಗಳು ಕೂಡ ಕನ್ನಡ ಸಾಹಿತ್ಯದ ಹಲವು ವಿಷಯಗಳಿಗೆ ಸ್ಪಷ್ಟವಾದ ಮಾಹಿತಿ ದೊರಕಿಸುತ್ತದೆ. ಈ ನಿಟ್ಟಿನಲ್ಲಿ ತಾಳಗುಂದ ಶಾಸನದ ಅಧ್ಯಯನದ ಮಹತ್ವ ಸಂಶೋಧಕರ ಅರಿವಿನ ನೆಲೆಗಳನ್ನು ವಿಸ್ತರಿಸುತ್ತದೆ. ಪುರಾತತ್ವ ಇಲಾಖೆ ಹಾಗೂ ಸಂಶೋಧಕರ ವಿಭಿನ್ನ ಮಾದರಿಯ ಅಧ್ಯಯನ ಕ್ರಮದಿಂದ ಇತ್ತೀಚೆಗೆ ದೊರೆತ ತಾಳಗುಂದಲ್ಲಿ ಸಿಂಹಕಟಾಂಜನ ಶಾಸನವು ಹೊಸ ಹೊಸ ವಿಷಯಗಳನ್ನ ತಿಳಿಸುತ್ತದೆ. ತಾಳಗುಂದದ ಪ್ರಣವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಉತ್ಖನನವನ್ನು ಕೈಗೊಂಡಾಗ ಸಿಕ್ಕ ಮಾಹಿತಿಗಳ ಆಧಾರದ ಮೇಲೆ ಕನ್ನಡದ ಮೊದಲ ಶಾಸನ ಎಂಬ ಹೆಗ್ಗಳಿಕೆ ಪಾತ್ರವಾಗಿದ್ದು ಇತ್ತೀಚಿನ ಹೊಸ ಅಧ್ಯಯನಗಳಿಂದ ಸಿಕ್ಕ ವಿಷಯವಾಗಿದೆ.

ತಾಳಗುಂದ ಶಿಕಾರಿಪುರದ ಇತಿಹಾಸದಲ್ಲಿ ಮಾತ್ರವಲ್ಲ, ಕರ್ನಾಟಕದ ಇತಿಹಾಸದಲ್ಲಿಯೂ ಒಂದು ಅತಿ ಮುಖ್ಯವಾದ ಹೆಸರು. ತಾಳಗುಂದ ಕರ್ನಾಟಕದ ಮೊಟ್ಟಮೊದಲ ವಿದ್ಯಾ ಕೇಂದ್ರ. ಅದೊಂದು ಘಟಿಕಾ ಸ್ಥಾನವಾಗಿತ್ತು. ಇಲ್ಲಿ ಅಧ್ಯಯನದಲ್ಲಿ ತೊಡಗಿದ್ದ ಮಯೂರಶರ್ಮನೆಂಬ ವಿದ್ಯಾರ್ಥಿಯು ಮುಂದೆ ಮಯೂರವರ್ಮನಾಗಿ ಕನ್ನಡದ ಮೊಟ್ಟಮೊದಲ ಸಾಮ್ರಾಜ್ಯವಾದ ಕದಂಬ ಸಾಮ್ರಾಜ್ಯದ ಸ್ಥಾಪನೆಗೆ ಕಾರಣನಾಗುತ್ತಾನೆ. ಇಲ್ಲಿರುವ ಪ್ರಣವೇಶ್ವರ ದೇವಾಲಯವೆ ಕರ್ನಾಟಕದಲ್ಲಿ ನಿರ್ಮಾಣವಾದ ಮೊದಲ ದೇವಾಲಯ. ಈ ದೇವಾಲಯದ ಪಕ್ಕದಲ್ಲಿರುವ ಪ್ರಣವೇಶ್ವರ ಕೆರೆ ಕರ್ನಾಟಕದಲ್ಲಿ ಉಪಲಬ್ಧ ವಿರುವ ಮೊಟ್ಟಮೊದಲ ಕೆರೆ. ಇಲ್ಲಿಯವರೆಗೆ ಹಲ್ಮಿಡಿ ಶಾಸನವೇ ಮೊದಲ ಕನ್ನಡ ಶಾಸನವೆಂದು ನಂಬಲಾಗಿತ್ತು. ಆದರೆ ಇತ್ತೀಚಿನ ಸಂಶೋಧನೆ ಕ್ರಿ.ಶ. 370 ರಿಂದ 450ರ ಅವಧಿಯ ತಾಳಗುಂದ ಶಾಸನವೇ ಮೊಟ್ಟ ಮೊದಲ ಕನ್ನಡ ಶಾಸನವೆಂದು ತಿಳಿಸುತ್ತಿದೆ. ಹೀಗೆ ಹಲವಾರು ಮೊದಲುಗಳಿಂದಾಗಿ ಕರ್ನಾಟಕದ ಭವ್ಯ ಇತಿಹಾಸ ಹಾಗೂ ಪರಂಪರೆಗೆ ತಳಹದಿ ಹಾಕಿದ ತಾಳಗುಂದದ ಬಗ್ಗೆ ತಿಳಿಯುವುದೇ ಒಂದು ಹೆಮ್ಮೆ. ಕ್ರಿ.ಶ. 450ರ ಶಾಸನವು "ಏವಮಾಗತೇ, ಕದಂಬ ಕುಲೇ, ಶ್ರೀ ಮಾನ್ವಭೂವದ್ವಿಜೋತ್ತಮಃ ನಾಮತೋ ಮಯೂರ, ಶರ್ಮೇತಿ ಶೃತಶೀಲಶೌಚ್ಯದ್ಯಲಂಕೃತ" ಎಂದು ಉಲ್ಲೇಖಿಸಿರುವ ಶಾಸನದ ಸಾಲಿನಲ್ಲಿ ಮಯೂರ ಶರ್ಮನ ಗುಣ, ಸ್ವಭಾವಗಳು ವರ್ಣಿಸಿದೆ. ಕದಂಬ

ಕುಲದ ಮಯೂರ ಶರ್ಮನು, ಶೃತಶೀಲ ಶೌಚಗಳಿಂದ ಅಲಂಕೃತನಾಗಿದ್ದನು. ಪ್ರವಚನದಲ್ಲಿ ಪಾರಂಪರಾಗತನಾಗಲು ತನ್ನ ಗುರುವಾದ ವೀರಶರ್ಮನ ಜೊತೆ ಕಂಚಿಗೆ ಹೊರಟನು ಎಂಬ ವಿವರವಿದೆ.

ಮಯೂರಶರ್ಮನ ತಂದೆ ಬಂಧುಷೇಣ, ಅವನ ತಂದೆ ವೀರಶರ್ಮ, ತಾಳಗುಂದದ ಶಾಸನದಲ್ಲಿ ತಿಳಿಸಿರುವಂತೆ ಮಯೂರಶರ್ಮನ ಅಜ್ಜನಾದ ವೀರಶರ್ಮನು ಅವನಿಗೆ ಗುರುವೂ ಆಗಿದ್ದುದು ಒಂದು ವಿಶೇಷ. ಹಾಗಾಗಿಯೆ "ಗುರುಣಾಂ ಸಮಂ ವೀರಶರ್ಮಣಾ" ಎಂದು ಶಾಸನದಲ್ಲಿ ಹೇಳಲಾಗಿದೆ. ಕುಂತಳ ನಾಡಿನ ತಾಳಗುಂದದ ಪ್ರಣವೇಶ್ವರ ಸಿದ್ಧಾಲಯದಿಂದ ಉನ್ನತ ವ್ಯಾಸಂಗಕ್ಕಾಗಿ ಕಂಚಿಗೆ ಹೋದ ವಿದ್ಯಾರ್ಥಿ ಮಯೂರಶರ್ಮ ಅಲ್ಲಿನ ಘಟಿಕಾ ಸ್ಥಾನ ಪ್ರವೇಶಿಸಿ ಆಶು ತಾರ್ಕಿಕನಾಗುತ್ತಾನೆ. ಆದರೆ ಸ್ವಾಭಿಮಾನಿಯಾದ ಆತ ಅಲ್ಲಿನ ಆಡಳಿತಗಾರರಾದ ಪಲ್ಲವರಿಂದ ಅವಮಾನವಾದಾಗ ಸಿಡಿದೇಳುತ್ತಾನೆ. ಮಯೂರಶರ್ಮನು ಮಯೂರವರ್ಮನಾಗುತ್ತಾನೆ. 'ಲೇಖನಿ ಹಿಡಿದ ಕೈ ಕತ್ತಿ ಹಿಡಿಯುತ್ತದೆ'. ಕನ್ನಡದ ಮೊಟ್ಟ ಮೊದಲ ಸಾಮ್ರಾಜ್ಯದ ನಿರ್ಮಾಣಕ್ಕೆ ಕಾರಣವಾಗುತ್ತಾನೆ.

ಕನ್ನಡ ನಾಡಿನ ವಿದ್ಯಾರ್ಥಿಯೊಬ್ಬ, ವಿದ್ಯೆಯ ಬಲದಿಂದ ಸ್ವಾಭಿಮಾನದ ಸಂಕೇತವಾಗಿ ಸಾಮ್ರಾಜ್ಯ ನಿರ್ಮಾಣಕ್ಕೆ ಮುಂದಾದದ್ದು, ತಾಳಗುಂದದ ಶಿಕಾರಿಪುರ ತಾಲೂಕಿನ ಸಂಸ್ಕೃತಿಗೆ ಮಾತ್ರವಲ್ಲ, ಕರ್ನಾಟಕದ ಭಾರತದ ಸಂಸ್ಕೃತಿಯ ಹಿರಿಮೆಗೆ ಸಂಕೇತವಾಗಿದೆ. ಈತ ಕಟ್ಟಿದ ಕದಂಬ ಸಾಮ್ರಾಜ್ಯ ಉತ್ತರ ಭಾರತದ ಗುಪ್ತ ದೊರೆಗಳೊಡನೆ ವೈವಾಹಿಕ ಸಂಬಂಧವನ್ನು ಹೊಂದಿ ಉತ್ತರ ಭಾರತ ಹಾಗೂ ದಕ್ಷಿಣ ಭಾರತದ ಬೆಸುಗೆಗೆ ಕಾರಣವಾಗಿತ್ತು ಎಂಬುದೂ ಒಂದು ಗಮನಾರ್ಹ ಅಂಶ. ಇದೇ ಶಾಸನವು 'ನಾನ ವಿಧ ಪ್ರವೀಣ ಸಾರ ಸಮುಚ್ಚಯೇಷು ಮುತ್ತದ್ವಿಪೇಂದ್ರ ಮದವಾಸಿತ. ಗೋಪು ರೇಷು ಸಂಗೀತದಲ್ಲು ನಿನದೇಷ್ಟು ಗೃಹೇಷುಯಸಲಕ್ಷ್ಯ ಜ್ಞಾನಾಧೃತಿ ಮತೀ ಸೂಚಿರಂಚ ರೇವೇ' ಎಂದು ಬಣ್ಣಿಸಿರುವ ಈ ಶಾಸನವು ಗುಪ್ತಾದಿಗಳೊಂದಿಗೆ ಸ್ನೇಹ, ಆದರ, ಪ್ರಣಯ, ಸಂಭ್ರಮದಿಂದ ಇದ್ದರೆಂಬುದು ಸಂಗೀತನಿನಾದ ಗೃಹಗಳಿದ್ದವೆಂಬುದು, ಈ ಸಾಮ್ರಾಜ್ಯದಲ್ಲಿ 'ದೀನಾಭ್ಯುದ್ಧರಣಂ' ಅಂದರೆ ಈ ಸಾಮ್ರಾಜ್ಯ ವಿದ್ಯೆಯನಾಡು, ನುಡಿಯ ಬೆಡಗು, ಜನಾಂಗ, ಭಾಷೆ, ಸಾಹಿತ್ಯ, ಸಂಸ್ಕೃತಿಯ ಶೋಧದ ನೆಲೆಗಳು ಆಗಿನ ಕಾಲದ ಜನರ ಬದುಕಿನ ಧ್ಯೇಯವಾಗಿದ್ದವು. ಜೀವನ ವಿದ್ಯೆಯ ತಾಯಿಯಾದರೆ, ವಿದ್ಯೆ ಸಂಸ್ಕೃತಿಯ ತಾಯಿಯಾಗಿರುತ್ತದೆ.

ಕದಂಬ ಮತ್ತು ಗುಪ್ತರ ನಡುವಿನ ಸಂಬಂಧಗಳನ್ನು ಉಲ್ಲೇಖಿಸಿರುವ ಈ

ಶಾಸನವು ಕ್ರಿ.ಶ. 450ರ ಸುಮಾರಿನಲ್ಲಿ ಕದಂಬ ರಾಜ ಕಾಕುತ್ಸ್ಥವರ್ಮನು ತನ್ನ ಹೆಣ್ಣು ಮಕ್ಕಳಲ್ಲಿ ಒಬ್ಬಳನ್ನು ಗುಪ್ತ ರಾಜಕುಮಾರನಿಗೆ ಮದುವೆ ಮಾಡಿಕೊಟ್ಟನೆಂದು ತಿಳಿಯಲಾಗಿದೆ. ಉತ್ತರದ ಆರ್ಯರು ದಕ್ಷಿಣದ ದ್ರಾವಿಡರು ಎಂಬ ವಾದದ ಮೂಲಕ ಮುಂದುವರಿಯುತ್ತದೆ. ಆರ್ಯ ದ್ರಾವಿಡವೆಂಬ ಸಂಗತಿಯನ್ನು ಹಿಡಿದು ಉತ್ತರ ಭಾರತ ಮತ್ತು ದಕ್ಷಿಣ ಭಾರತದ ನಡುವೆ ಒಡಕನ್ನು ನಿರ್ಮಿಸುವ ವ್ಯವಸ್ಥಿತ ಕಾರ್ಯ ನಡೆಯುತ್ತಿರುವ ಆಧುನಿಕ ಸಂದರ್ಭದಲ್ಲಿ ಕನ್ನಡ ಮೊಟ್ಟ ಮೊದಲ ಸಾಮ್ರಾಜ್ಯಕಟ್ಟಿದ ಮನೆತನವೊಂದು ವೈವಾಹಿಕ ಸಂಬಂಧದ ಮೂಲಕ ರಾಷ್ಟ್ರೀಯ ಐಕ್ಯತೆಗೆ ಕಾರಣವಾಗಿತ್ತು ಎಂಬುದು ಭಾರತದ ಆಧುನಿಕ ಸಾಂಸ್ಕೃತಿಕ ಸಂದರ್ಭದಲ್ಲಿ ಬಹಳ ಮುಖ್ಯವಾದ ಘಟನೆಯನ್ನು ವರ್ಣಿಸುವ ಶಾಸನವಾಗಿದೆ. ಇತಂಹ ದೊಂದು ಮಾಹಿತಿ ನೀಡುವ ತಾಳಗುಂದ ಶಾಸನ ಅತ್ಯಂತ್ಯ ಶ್ಲಾಘನೀಯವಾಗಿದೆ.

ಕದಂಬ ದೊರೆ ಕಾಕುಸ್ಥ ವರ್ಮನು ತಾಳಗುಂದದಲ್ಲಿ ಕ್ರಿ.ಶ. 450 ರಷ್ಟು ಪ್ರಾಚೀನ ಕಾಲದಲ್ಲಿರುವ ಕರ್ನಾಟಕದ ಮೊಟ್ಟಮೊದಲ ಕೆರೆಯೊಂದನ್ನು ನಿರ್ಮಿಸಿದ್ದಲ್ಲದೆ ಸ್ತಂಭ ಶಾಸನವೊಂದನ್ನು ಸ್ಥಾಪಿಸಿ ಸಂಸ್ಕೃತಿಯ ನಿರ್ಮಾಣ ಕ್ಕೆ ಹಾಗೂ ಸಂಸ್ಕೃತಿಯ ಅಧ್ಯಯನಕ್ಕೆ ಕಾರಣನಾಗಿದ್ದಾನೆ. "ಕುಬ್ಜ" ಎಂಬ ಕವಿ ಈ ಶಾಸನವನ್ನು ಬರೆದಿದ್ದು ಈತ ಕರ್ನಾಟಕದ ಶಾಸನಗಳಲ್ಲಿ ದೊರಕುವ ಮೊದಲ ಸಂಸ್ಕೃತದ ಕವಿ ಮಾತ್ರವಲ್ಲದೆ ಮೊದಲ ಶಾಸನ ಕವಿಯೂ ಆಗಿರುತ್ತಾನೆ. ತಾಳಗುಂದದ ವಿದ್ಯಾಭ್ಯಾಸದ ಕೇಂದ್ರವಾಗಿರುವ ಪ್ರಣವೇಶ್ವರ ದೇವಾಲಯವನ್ನು 'ಸ್ವಸ್ತಿ ಸಮಸ್ತ ಭುವನ ಸಂಸ್ತೂರ್ಯಮಾನಾಶೇಷಲೋಕೈಕ ಪಿತಾಮಹ ಹಿರಣ್ಯಗರ್ಬ್ಬಬ್ರಹ್ಮ ಸಂಸ್ಥಾಪಿತ ಶ್ರೀಮಳೋಕ್ಯನಾಥ ಪ್ರಣವೇಶ್ವರ ದೇವಾಧಿಷ್ಟಿತವಿಷ್ಟಿತ ವಿಸಿಷ್ಟಾಗ್ರಹಾರಾಧೀಶ್ವರರ್" ಎಂದು ಹೇಳುತ್ತಾ ಅದನ್ನು ಹಿರಣ್ಯಗರ್ಭಬ್ರಹ್ಮ ಸ್ಥಾಪಿಸಿದ್ದು ಎನ್ನಲಾಗಿದೆ. ಕ್ರಿ.ಶ. 935ರ ಶಾಸನದಲ್ಲಿ ಪುಳಿಯಮ್ಮ ಹೆಗ್ಗಡೆಯು ತಾಳಗುಂದದ ಕೆರೆಯನ್ನು ಕಟ್ಟಿಸಿ (ಜೀರ್ಣೋದ್ಧಾರ) ಪ್ರಣವೇಶ್ವರ ದೇವರ ನೈವೇದ್ಯಕ್ಕೆ, ನಂದಾದೀವಿಗೆಗೆ, ಗ್ರಂಥಾಧ್ಯಯನಕ್ಕೆ ದತ್ತಿಬಿಟ್ಟಿರುವ ಅಂಶ ದಾಖಲಾಗಿದೆ. "ಸಪ್ತದಿವ್ಯಗಳು ಸದಾ ನಡೆಯುತ್ತಿದ್ದ ಪ್ರಣವೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ 'ಅರವಟಿಗೆ' ಯೊಂದಿತ್ತೆಂಬೂದೂ ಶಾಸನೀಯವಾಗಿ ತಿಳಿದು ಬರುತ್ತದೆ. ಇದನ್ನು ಮಾಧವಭಟ್ಟನು ಸ್ಥಾಪಿಸಿದನೆಂಬುದು ದೇಗುಲದ ಈಶಾನ್ಯದಲ್ಲಿರುವ ಶಾಸನ ತಿಳಿಸುತ್ತದೆ" ಎಂಬ ಅಭಿಪ್ರಾಯದಲ್ಲಿ ರಘುನಾಥಭಟ್ ಅವರು ಹೇಳುವಂತೆ ಅರವಟ್ಟಿಗೆ ಕಟ್ಟಿಸಿದವನು ಮಾಧವಭಟ್ಟನಲ್ಲ. ಅರವಟ್ಟಿಗೆಯನ್ನು ಕಟ್ಟಿಸಿಯೂ ಇಲ್ಲ. ಆ ಶಾಸನದಲ್ಲಿ ಈ ರೀತಿ ಇದೆ.

"ನಮೋ ಭಗವತೇಸ್ಥಾನ ಕುಂದೂರು ವಾಸಿನೇ ಮಹಾದೇವಾಯ"

ಎಂದು ಕುಬ್ಜ ಕವಿಯಿಂದ ಪ್ರಾರ್ಥಿಸಿ ಕೊಂಡಿರುವ ಪ್ರಣವೇಶ್ವರನ ಸನ್ನಿಧಾನವು ಒಂದು ಸಿದ್ಧಾಲಯವೂ ಆಗಿದ್ದು ಪುಣ್ಯಕ್ಷೇತ್ರವೂ ಆಗಿತ್ತು. ಬಹುದೊಡ್ಡ ವಿದ್ಯಾರ್ಥಿ ಕೇಂದ್ರ ಆಗಿತ್ತು. ಇಂತಹ ಕೇಂದ್ರವನ್ನು ಹೊಂದಿದ್ದ ತಾಳಗುಂದವು ಶಾತಕರಣಿಗಳ ಕಾಲದಿಂದ ಹೊಯ್ಸಳರ ಕಾಲದವರೆಗೂ ಮತ್ತು ಅನಂತರದಲ್ಲಿಯೂ ಬಹಳ ಪ್ರಖ್ಯಾತವಾಗಿದ್ದು ಸಂಪದ್ಭರಿತವೂ ಆಗಿದ್ದಲ್ಲದೆ ಅತ್ಯಂತ ಮೇಧಾವಿ ಪಂಡಿತ ಪರಂಪರೆಯನ್ನು ಅಷ್ಟೇ ಸಹೃದಯಿಗಳಾದ ದಾನಿಗಳನ್ನು, ಅಷ್ಟೇ ಶೂರರಾದ ರಕ್ಷಕ, ವೀರಭಟರನ್ನು, ನಾಡಗಾವುಂಡರನ್ನು, ದಂಡ ನಾಯಕರನ್ನು, ಹೊಂದಿತ್ತು ಎಂದು ತಿಳಿದು ಬರುತ್ತದೆ. ಇಂತಹ ತಾಳಗುಂದದಲ್ಲಿ "ಮವತ್ತಿಚ್ಛಾನೆರ" ಅಂ ದರೆ ಮುವತ್ತೆರಡು ಸಾವಿರ ವಿದ್ವಾಂಸರಿದ್ದುದಾಗಿ ಹೇಳಲಾಗಿದೆ. ಈ ಸಂಖ್ಯೆ ತಾಳಗುಂದದಲ್ಲಿ ನಡೆಯುತ್ತಿದ್ದ ಶೈಕ್ಷಣಿ ಚಟುವಟಿಕೆಗಳ ವಿಸ್ತಾರ, ಮಹತ್ವ ಹಾಗೂ ಅಲ್ಲಿ ರೂಪುಗೊಂಡಿದ್ದ ಆರೋಗ್ಯವಂತ ಸಮಾಜದ ಸಂಕೇತವಾಗಿ ನಮ್ಮ ಮುಂದೆ ನಿಲ್ಲುತ್ತದೆ. ಈ ವಿದ್ವಾಂಸರು ವೇದ, ವೇದಾಂಗ, ತರ್ಕ, ಮೀಮಾಂಸೆ, ಪುರಾಣ, ದರ್ಶನ, ಸ್ಮೃತಿ, ವಾಸ್ತು, ಕಾವ್ಯ, ಶಾಸ್ತ್ರ, ನಾಟಕ, ಸಂಸ್ಕೃತ, ಕನ್ನಡ ಮೊದಲಾದ ವಿಷಯಗಳಲ್ಲಿ ಪರಿಣಿತರಾಗಿದ್ದರೆಂದು ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ವಿದ್ಯಾಕೇಂದ್ರವಾಗಿದ್ದ ತಾಳಗುಂದ 1261ರ ನಂತರದಲ್ಲಿಯೂ ಅಂತಹ ಒಂದು ಮಹತ್ವವಾದ ವಿದ್ಯಾ ಚಟುವಟಿಕೆಗಳ ಕೇಂದ್ರವಾಗಿತ್ತು ಎಂಬುದು ದಾಖಲಾತಿಗಳಿಂದ ತಿಳಿದು ಬರುತ್ತದೆ.

ತಾಳಗುಂದ ಶಾಸನವು ವೇದಶಾಸ್ತ್ರಾಂಗಗಳ ಅಧ್ಯಯನ ಮಾಡುವ ವಿಷಯಗಳ ಬಗ್ಗೆ ಹಾಗೂ ವಿದ್ವಾಂಸರ ಪಂಡಿತರುಗಳ ಬಗ್ಗೆ ವಿವರವಾದ ಮಾಹಿತಿ ನೀಡುತ್ತದೆ. ವಿದ್ಯಾಭ್ಯಾಸ ಮಾಡಿಸುವ ಕನ್ನಡ ಉಪಾಧ್ಯಾಯನ ಉಲ್ಲೇಖಕ್ಕೆ ಸಂಬಂಧಿಸಿದಂತೆ ಎಂ.ಚಿದಾನಂದ ಮೂರ್ತಿಯವರು ಕನ್ನಡ ಉಪಾಧ್ಯಾಯನಿಗೆ ಐದು ಗದ್ಯಗಳನ್ನು ಬಿಟ್ಟು ಕೊಟ್ಟಂತೆ ಹೇಳಿದೆ. ಕನ್ನಡ ಉಪಾಧ್ಯಾಯನ ಕರ್ತವ್ಯಗಳ ಬಗ್ಗೆ ಮಾಹಿತಿ ನೀಡುವ ಈ ಶಾಸನವು ಕನ್ನಡ ಅಕ್ಷರಗಳನ್ನು, ಸಾಹಿತ್ಯವನ್ನು ಬೋಧಿಸುವುದು ಹಾಗೂ ಕಲಿಸುವುದು ಅವರ ಕರ್ತವ್ಯವಾಗಿದಿತ್ತು. ಹಾಗೆಯೇ ಕನ್ನಡ ಓಲೆಗಳ ಮೇಲಿನ ರಚನೆ ಶಾಸನಗಳಿಗಾಗಿ ಕಲ್ಲಿನ ಮೇಲಿನ ಕೆತ್ತನೆಯನ್ನು ಕಲಿಯಬೇಕಾಗಿತ್ತು ಎಂದಿದೆ. ಅಷ್ಟೇ ಅಲ್ಲದೆ ಶಿಕಾರಿಪುರ ತಾಲೂಕಿನ ಅನೇಕ ಶಾಸನಗಳಲ್ಲಿಯೂ ಸೊಗಸಾದ ಕಾವ್ಯಾತ್ಮಕ ಪದ್ಯಗಳನ್ನು ಒಳಗೊಂಡ ಶಾಸನಗಳಿವೆ. ಈ ಕಾರಣದಿಂದ ಜಕ್ಕಲಚ್ಚು, ಶಾಂತಿನಾಥ ನಂದ ಕವಿಗಳು ಅಕ್ಕಮಹಾದೇವಿ, ಅಲ್ಲಮ ಪ್ರಭುವಿನಂತಹ ಮೇಧಾವಿಗಳು ಬೆಳೆದು ಬಂದಿರಬಹುದೆಂಬ ಚರ್ಚೆಗಳು ಕೂಡ ನಡೆಯುತ್ತಿವೆ. ಈ ಶಾಸನದಲ್ಲಿ ವಿದ್ಯಾಭ್ಯಾಸ, ಗುರುಗಳ ಪರಂಪರೆ ಹಾಗೂ

ವಿದ್ಯಾರ್ಥಿಗಳ ಸಮೂಹಗಳು, ಸಂಸ್ಕೃತ ಮಹಾಪಾಠ ಶಾಲೆಗಳಂತಹ ಕೇಂದ್ರಗಳು ಹಾಗೂ ಕನ್ನಡ ಅಧ್ಯಯನಗಳು ಸಹ ನಡೆಯುತ್ತಿತ್ತು.

ಪ್ರಣವೇಶ್ವರ ದೇವಾಲಯದ ಪಕ್ಕದಲ್ಲಿಯೆ ಇರುವ ಕುರುಚಲು ಗಿಡಗಳಿಂದ ತುಂಬಿದ ಗುಡ್ಡದ ಮೇಲಿರುವ ಕೆಲವು ಬಂಡೆಗಳ ಮೇಲೆ ಅಕ್ಷರಗಳನ್ನು ಕೆತ್ತಿ ಅಭ್ಯಾಸ ಮಾಡಿರಬಹುದಾದ ಗುರುತುಗಳಿವೆ. ಹಾಗೂ ಅಲ್ಲಿ ಮನೆಗಳಿದ್ದಿರ ಬಹುದಾದ ಕುರುಹುಗಳಿವೆ. ಈ ಎಲ್ಲದರ ಬಗ್ಗೆ ಹೆಚ್ಚು ತಿಳಿಯಬೇಕಾದರೆ ಈ ಪ್ರದೇಶದಲ್ಲಿ ಸಮಗ್ರ ಉತ್ಖನನ ನಡೆಯ ಬೇಕಾಗಿದೆ. ಇಲ್ಲಿ ಪ್ರತಿಯೊಂದು ಕೆಲಸದವರಿಗೂ ನಿಶ್ಚಿತ ಮೊತ್ತದ ದತ್ತಿ ನಿಗದಿ ಮಾಡಿದ ರೀತಿ ಬಹಳ ವೈಜ್ಞಾನಿಕವಾಗಿ ಕಾಣುತ್ತಿದೆ. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ, ನಾವಿದರಿಗೆ, ಅಡುಗೆ ಮಾಡುತ್ತಿದ್ದ ಬಾಣಸೆಗಿತ್ತಿಯ ರಿಗೆ, ಪೂಜಾರಿಗಳಿಗೆ, ದವಸಿಗರಿಗೆ ಹಾಗೂ ಅವರ ಆಹಾರ, ಬಟ್ಟೆ, ವಸತಿ, ಅಧ್ಯಯನ ಎಲ್ಲದಕ್ಕೂ ನಿರ್ದಿಷ್ಟವಾದ ಹಾಗೂ ಪ್ರತ್ಯೇಕವಾದ ದತ್ತಿ ದಾನವನ್ನು ನಿಗದಿ ಪಡಿಸಿರುವುದು ಒಂದು ಉತ್ತಮ ವ್ಯವಸ್ಥೆ ಇತ್ತೆಂಬುದಕ್ಕೆ ಸಾಕ್ಷಿ. ಇಲ್ಲಿ ಶ್ರಮ, ಸಹಕಾರ, ಹಾಗೂ ಸಹಭಾಗಿತ್ವಕ್ಕೆ ಆಧ್ಯತೆ ಇತ್ತೆಂದು ತಿಳಿದು ಬರುತ್ತದೆ. ಹೀಗೆ ಶಿಕ್ಷಣ, ಧಾರ್ಮಿಕತೆ, ಆಧ್ಯಾತ್ಮಿಕತೆ, ಶಿಲ್ಪಕಲೆ, ಶ್ರಮ, ಸಹಕಾರ, ಸಹಭಾಗಿತ್ವಕ್ಕೆ ಹಾಗೂ ವ್ಯವಸ್ಥಿತ ಸಾಮಾಜಿಕ ಬದುಕಿಗೆ ಮಾತ್ರವಲ್ಲದೆ ಒಂದು ಸಾಮ್ರಾಜ್ಯದ ಉದಯಕ್ಕೆ ಅದರ ವಿಸ್ತಾರಕ್ಕೆ ಆ ಮೂಲಕ ಒಂದು ವಿಶಿಷ್ಟ ಸಾಂಸ್ಕೃತಿಕ ಪರಂಪರೆಗೆ ಭದ್ರಬುನಾದಿ ಹಾಕಿದ ತಾಳಗುಂದ ಕೇವಲ ಶಿಕಾರಿಪುರ ಮಾತ್ರವಲ್ಲದೆ ಸಮಗ್ರ ಕರ್ನಾಟಕದ ಇತಿಹಾಸಕ್ಕೆ ಆ ಮೂಲಕ ಭಾರತದ ಇತಿಹಾಸಕ್ಕೆ, ಸಂಸ್ಕೃತಿಗೆ ಅಮೂಲ್ಯ ಕೊಡುಗೆ ನೀಡಿರುವುದು ನಮ್ಮ ಹೆಮ್ಮೆ.

**ಪರಾಮರ್ಶನ ಗ್ರಂಥಗಳು:**

1. ಮೇವುಂಡಿ ಮಲ್ಲಾರಿ. (2013). ಕನ್ನಡ ನಾಡಿನ ಶಾಸನ ಕವಿಗಳು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ಚಿದಾನಂದಮೂರ್ತಿ ಎಂ. (2020). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸ್ವಪ್ನ ಬುಕ್‌ಹೌಸ್. ಬೆಂಗಳೂರು.
3. ಬಸವರಾಜ ಕಲ್ಗುಡಿ. (2019). ಮಹಾಸತಿ ಒಂದು ಆಚರಣೆ. ಅಭಿನವ ಪ್ರಕಾಶನ. ಬೆಂಗಳೂರು.
4. ಭೋಜರಾಜ ಪಾಟೀಲ್. (2018). ನಾಗರಖಂಡ 70. ಸುವ್ವಿ ಪ್ರಕಾಶನ. ಶಿಕಾರಿಪುರ.
5. ವಸಂತ ಕುಮಾರ್ ಬಿ.ವಿ. (2005). ಶಿಕಾರಿಪುರದ ಸಾಂಸ್ಕೃತಿಕ ಸಂಕಥನ. ನೇಕಾರ ಪ್ರಕಾಶನ. ಸೊರಬ.
6. ಕಲ್ಬುರ್ಗಿ ಎಂ.ಎಂ. (2014). ಶಾಸನಗಳಲ್ಲಿ ಶಿವಶರಣರು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
7. ಎಪಿಗ್ರಾಫಿಯಾ ಕರ್ನಾಟಕ ಸಂಪುಟ. (2014). 14ನೇ ಆವೃತ್ತಿ. ಕರ್ನಾಟಕ ಸರ್ಕಾರ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.